# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 08.09.2011**

## ಪಾಲಿಕೆಯ ಕಾ.ಪಾ.ಅ-ಪದ್ಮನಾಭನಗರ ವಿಭಾಗ ಕಛೇರಿ ಸ್ಥಳಾಂತರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯದ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) ವಿಭಾಗ ಕಛೇರಿಯು ಚೆನ್ನಮ್ಮನಕೆರೆ ಆಟದ ಮೈದಾನ, ಬೆಂಗಳೂರು-28 ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದು ಬಸವನಗುಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಕುಮಾರಸ್ವಾಮಿ ಬಡಾವಣೆ ವಾರ್ಡ್ ನಂ.181ರಲ್ಲಿ ನೂತನವಾಗಿ ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) ವಿಭಾಗಕ್ಕೆ ಕಟ್ಟಡವನ್ನು ನಿರ್ಮಿಸಿದ್ದು, ಈಗ ಈ ಕಛೇರಿಯನ್ನು ವಾರ್ಡ್ ನಂ.181ರ ಕುಮಾರಸ್ವಾಮಿ ಬಡಾವಣೆ, ಬೆಂಗಳೂರು-78 (ಸಾಗರ್ ಆಸ್ಪತ್ರೆ ಎದುರುಗಡೆ) ನೂತನವಾಗಿ ನಿರ್ಮಿಸಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಪದ್ಮನಾಭನಗರ) ವಿಭಾಗ ರವರು ತಿಳಿಸಿರುತ್ತಾರೆ. ಸಂಬಂಧಪಟ್ಟ ಸಾರ್ವಜನಿಕರು ಇನ್ನು ಮುಂದೆ ಸ್ಥಳಾಂತರಗೊಂಡಿರುವ ಕಛೇರಿಯನ್ನು ತಮ್ಮ ಕೆಲಸ ಕಾರ್ಯಗಳಿಗೆ ಸಂಪರ್ಕಿಸಲು ಕೋರಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 08.09.2011**

ಇತ್ತೀಚೆಗೆ ನಗರದಲ್ಲಿ ಅತಿಯಾದ ಮಳೆಯಿಂದ ನಗರದ ರಸ್ತೆಗಳು ಹದಗಟ್ಟಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗಿರುವ ಹಿನ್ನೆಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ರಸ್ತೆ ಗುಂಡಿಗಳನ್ನು ಮುಚ್ಚುವ ವಿಶೇಷ ಕಾರ್ಯಚರಣೆ ನಗರದ ಎಲ್ಲಾ ವಲಯಗಳಲ್ಲಿ ಪ್ರಾರಂಭಿಸಿದೆ.

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯ ವ್ಯಾಪ್ತಿಯಲ್ಲಿ ಬರುವ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಯಲ್ಲಿ ರಸ್ತೆ ಗುಂಡಿ ಮುಚ್ಚುವ ಕಾರ್ಯ ಕೈಗೆತ್ತಿಕೊಂಡಿದ್ದು, ಸರ್ವಜ್ಞನಗರ ವಾರ್ಡ್‌ನಲ್ಲಿ ಹೆಚ್.ಬಿ.ಆರ್. 4ನೇ ಬ್ಲಾಕ್ ಮತ್ತು ಸಿದ್ದಾರ್ಥನಗರ ಪ್ರದೇಶಗಳಲ್ಲಿ ಒಟ್ಟು 400 ರಸ್ತೆಗುಂಡಿಗಳಿದ್ದು, ಅದರಲ್ಲಿ 150 ಗುಂಡಿಗಳನ್ನು ಮುಚ್ಚಲಾಗಿದ್ದು, 250 ಬಾಕಿ ಉಳಿದಿದೆ. ಹೆಬ್ಬಾಳ ವಾರ್ಡ್‌ನ ಸಂಜಯನಗರ ರಸ್ತೆಯಲ್ಲಿ 25 ರಸ್ತೆಗುಂಡಿಗಳು, ಶಿವಾಜಿನಗರ ವಾರ್ಡ್‌ನಲ್ಲಿ ವಸಂತನಗರ, ಮೌಂಟ್ ಕಾರ್ಮೆಲ್ ಕಾಲೇಜ್ ಹತ್ತಿರ 17 ರಸ್ತೆಗುಂಡಿಗಳು, ಹಡ್ಸನ್ ವೃತ್ತದಲ್ಲಿ 9 ಗುಂಡಿಗಳು, ಶಿವಾಜಿನಗರ ಬಸ್ ನಿಲ್ದಾಣದ ಹತ್ತಿರ 6 ಗುಂಡಿಗಳು ಮತ್ತು ಕೆ.ಆರ್. ವೃತ್ತದಲ್ಲಿ 5 ಗುಂಡಿಗಳಿದ್ದು, ಈ ಎಲ್ಲಾ ರಸ್ತೆಗಳಲ್ಲಿ ಇರುವಂತಹ ರಸ್ತೆಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ.

ಕಳೆದ 3 ದಿನಗಳಿಂದ ಮಳೆ ಕಡಿಮೆಯಾಗಿರುವುದರಿಂದ ಪಾಲಿಕೆಯ 8 ವಲಯಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯ ಕೈಗೊಳ್ಳಲಾಗಿದೆ. ಈ ತಿಂಗಳ ಅಂತ್ಯದ ಒಳಗಾಗಿ ಪ್ರಮುಖ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ ಎಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**